# <u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖೆಯಲ್ಲಿ ಆಂತರಿಕ ಸಾರ್ವಜನಿಕ ಖಾಸಗಿ ಸಹಭಾಗಿತ್ವ(ಪಿಪಿಪಿ) ಕೋಶವನ್ನು ಸೃಜಿಸುವ ಬಗ್ಗೆ.

**ಓದಲಾಗಿದೆ:** 1. ನಿರ್ದೇಶಕರು, ಪಿಪಿಪಿ ಕೋಶ ರವರ ಅನಧಿಕೃತ ಟಿಪ್ಪಣಿ ಸಂಖ್ಯೆ:ಐಡಿಡಿ 01 ಐಟಿಎಸ್ 2019, ದಿನಾಂಕ:09.08.2021.

2. PPP Policy for infrastructure projects-2018 for the State of Karnataka.

**<u>ಪ್ರಸ್ತಾವನೆ:</u>**

ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖೆಯು ಇತ್ತೀಚಿನ ದಿನಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾಧರಿಯಲ್ಲಿ ರೂಪಿಸಿ ಅನುಷ್ಠಾನಗೊಳಿಸುವ ಉದ್ದೇಶ ಹೊಂದಿದ್ದು, ಕೆಲವೊಂದು ಯೋಜನೆಗಳನ್ನು ಗುರುತಿಸುತ್ತಿದೆ.

ಖಾಸಗಿ ಸಹಭಾಗಿತ್ವ ಬಂಡವಾಳವನ್ನು ಪರಿಗಣಿಸಿ ಮೇಲೆ ಓದಲಾದ (2)ರ PPP Policy-2018 ಅನ್ವಯ ಪಿಪಿಪಿ ಮಾಧರಿಯ ಮೂಲ ಸೌಕರ್ಯ ಯೋಜನೆಗಳು ಪರಿಕಲ್ಪನಾ ಹಂತದಿಂದ ಮುಕ್ತಾಯದ ಹಂತದವರೆಗೂ ದೀರ್ಘಕಾಲೀನ (ಸುಮಾರು 15ರಿಂದ 30 ವರ್ಷದೊಳಗಿನ) ಯೋಜನೆಗಳಾಗಿರುತ್ತವೆ. ಅಂತಹ ಯೋಜನೆಗಳ ಧನಾತ್ಮಕ ಪರಿಣಾಮಕ್ಕೆ ರೂಪುರೇಷೆಯಿಂದ ಮುಕ್ತಾಯದವರೆಗೆ (from concept to completion) ಕಾಲಾನುಸಾರ ಮಾರ್ಗದರ್ಶನ ಸಮನ್ವಯ, ಅನುಮೋದನೆ, ಮೇಲ್ವಿಚಾರಣೆ ಸಮಸ್ಯೆಗಳ ಪರಿಹಾರ ವರದಿ ಮಾಡುವ ಕಾರ್ಯವಿಧಾನ ಮುಂತಾದ ಕ್ರಮಗಳಿಗೆ ಇಲಾಖೆ/ಸಂಸ್ಥೆಗಳ ಸಕಾಲಿಕ ಪಾಲುಗಾರಿಕೆ/ಪಾಲ್ಗೊಳ್ಳುವಿಕೆಯ ಅವಶ್ಯಕತೆ ಇರುತ್ತದೆ.

ಇಲಾಖೆಯ ಪಿಪಿಪಿ ಯೋಜನೆಗಳಿಗೆ ಅಗತ್ಯವಾದ ಎಲ್ಲಾ ಸಹಕಾರಗಳನ್ನು ನಿರ್ವಹಿಸಲು ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖೆಯಲ್ಲಿ ಆಂತರಿಕ ಪಿಪಿಪಿ ಕೋಶವನ್ನು ಸೃಜಿಸುವಂತೆ ಮೇಲೆ ಓದಲಾದ (1)ರ ಅನಧಿಕೃತ ಟಿಪ್ಪಣಿಯಲ್ಲಿ ನಿರ್ದೇಶಕರು, ಪಿಪಿಪಿ ಕೋಶ, ಮೂಲಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆರವರು ಕೋರಿರುತ್ತಾರೆ.

ಮೇಲೆ ತಿಳಿಸಿದ ಅಂಶಗಳ ಹಿನ್ನಲೆಯಲ್ಲಿ ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖೆಯಡಿ ಗುರುತಿಸಿರುವ/ಗುರುತಿಸಲಾಗುವ ಪಿಪಿಪಿ ಯೋಜನೆಗಳನ್ನು ಅನುಷ್ಠಾನಗೊಳಿಸಿ, ಉತ್ತೇಜಿಸಲು ಅವಶ್ಯಕವಿರುವ ಆಂತರಿಕ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಕೋಶವನ್ನು ಸೃಜಿಸಲು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಆನಾಸ 104 ಎಫ್‌ಪಿಪಿ 2021 ಬೆಂಗಳೂರು, ದಿನಾಂಕ:28.10.2021</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಆಂತರಿಕವಾಗಿ ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖೆಯ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಕೋಶವನ್ನು ಕೆಳಕಾಣಿಸಿದಂತೆ ಸೃಜಿಸಿ, ಆದೇಶಿಸಲಾಗಿದೆ.

| ಕ್ರ.ಸಂ | ಅಧಿಕಾರಿ/ಸಂಸ್ಥೆಗಳ ವಿವರ | ವಿವರ |
|---|---|---|
| 1 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,<br>ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ, ಇಲಾಖೆ, ಬೆಂಗಳೂರು | ಅಧ್ಯಕ್ಷರು |

| | | |
|---|---|---|
| 2 | ಆಯುಕ್ತರು,<br>ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು | ಸದಸ್ಯರು |
| 3 | ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ, ಬೆಂಗಳೂರು | ಸದಸ್ಯರು |
| 4 | ರಿಜಿಸ್ಟ್ರಾರ್,<br>ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು | ಸದಸ್ಯರು |
| 5 | ನಿಯಂತ್ರಕರು<br>ಕಾನೂನು ಮಾಪನ ಶಾಸ್ತ್ರ, ಇಲಾಖೆ, ಬೆಂಗಳೂರು | ಸದಸ್ಯರು |
| 6 | ಕಾರ್ಯಪಾಲಕ ಅಭಿಯಂತರರು,<br>ನಂ.1, ಕಟ್ಟಡ ವಿಭಾಗ,<br>ಲೋಕೋಪಯೋಗಿ ಇಲಾಖೆ | ಸದಸ್ಯರು |
| 7 | ಸರ್ಕಾರದ ಉಪ ಕಾರ್ಯದರ್ಶಿ,<br>ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ, ಇಲಾಖೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |

ಸದರಿ ಅಧಿಕಾರಿಗಳು ಹಾಲಿ ನಿರ್ವಹಿಸುತ್ತಿರುವ ಜವಾಬ್ದಾರಿಗಳು ಜೊತೆಗೆ ಹೆಚ್ಚುವರಿಯಾಗಿ ಕಾರ್ಯ ನಿರ್ವಹಿಸುವರು.

ಈ ಸಾರ್ವಜನಿಕ ಖಾಸಗಿ ಸಹಭಾಗಿತ್ವ (PPP) ಕೋಶದ ಕಾರ್ಯ ಚಟುವಟಿಕೆಗಳು PPP Policy-2018 ಅನ್ವಯ ಯೋಜನೆಯ ಪರಿಕಲ್ಪನೆಯಿಂದ ಮುಕ್ತಾಯದವರೆಗೆ ಯೋಜನಾ ಅನುಷ್ಠಾನ ಸಂಸ್ಥೆಯೊಂದಿಗೆ ವಿಷಯವಾರು ಪಾಲ್ಗೊಳ್ಳುವಿಕೆಯಿಂದ ತೀರ್ಮಾನದವರೆವಿಗೆ ಇದ್ದು, ಯೋಜನೆಯ ಕುರಿತು ಆಡಳಿತ ಇಲಾಖೆಯ ಮುಖ್ಯಸ್ಥರಿಗೆ ಸೂಕ್ತ ಶಿಫಾರಸ್ಸನ್ನು ಮಾಡವವರೆಗೆ ಇರುತ್ತದೆ. ಪ್ರಮುಖವಾಗಿ ಈ ಕೆಳಗಿನ ಚಟುವಟಿಕೆಗಳನ್ನು ಗುರುತಿಸಿದೆ;

1. ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆಗಳನ್ನು ಗುರುತಿಸಿ ಪರಿಕಲ್ಪನೆ ರೂಪಿಸುವುದು ಮತ್ತು ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖೆಯ List of Pipeline PPP Projects ಸಿದ್ಧಪಡಿಸುವುದು.
2. ಸಂಬಂಧಪಟ್ಟ ಭಾಗೀದಾರರೊಂದಿಗೆ (Stake holders) ಸಮಾಲೋಚಿಸಿ ಯೋಜನೆಗಳನ್ನು ಅಭಿವೃದ್ಧಿಪಡಿಸುವುದು.
3. ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆಗಳಿಗೆ ಸಲಹೆಗಾರರನ್ನು ಆಯ್ಕೆ ಮಾಡುವುದು.
4. ಸಲಹೆಗಾರರು ಸಿದ್ಧಪಡಿಸಿದ ಪರಿಕಲ್ಪನೆ ಕಾರ್ಯಸಾಧ್ಯತಾ ಮತ್ತು ಯೋಜನಾ ವರದಿಗಳನ್ನು ಮೌಲ್ಯ ಮಾಪನ ಮಾಡಲು, ಪಾರದರ್ಶಕ ಸಂಗ್ರಹಣೆ, ಆಂತರಿಕ ಮೌಲ್ಯಮಾಪನ ಮಾರ್ಗಸೂಚಿಗಳನ್ನು ನಿಯಮಾನುಸಾರ ಅಭಿವೃದ್ಧಿ ಪಡಿಸುವುದು ಹಾಗೂ ಮೌಲ್ಯಮಾಪನ ಮಾಡುವುದು;
5. ವಸ್ತುನಿಷ್ಠ ವಿಶ್ಲೇಷಣೆ ಆಧಾರದ ಮೇಲೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆಗಳಿಗೆ ಅಗತ್ಯವಿರುವ ಎಲ್ಲಾ ಸಕಾಲಿಕ ಅನುಮೋದನೆಯನ್ನು ಪಡೆಯಲು ನಿಯಮಾನುಸಾರ ಕ್ರಮಕೈಗೊಳ್ಳುವುದು;

6. ಭಾರತ ಸರ್ಕಾರ/ರಾಜ್ಯ ಸರ್ಕಾರದ ಇತರ ಸಾರ್ವಜನಿಕ ಖಾಸಗಿ ಸಹಭಾಗಿತ್ವ (PPP) ಕೋಶಗಳೊಂದಿಗೆ ಸಂವಹನ ನಡೆಸುವುದು;
7. ಅನುಷ್ಠಾನದಲ್ಲಿರುವ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆಗಳನ್ನು ಪರಿಶೀಲಿಸಿ ಯೋಜನೆ ಮುಕ್ತಾಯದವರೆಗೆ ನಿರಂತರ ಮೇಲ್ವಿಚಾರಣೆ ಮಾಡುವುದು;
8. ಇಲಾಖೆಯ ಇತರೆ ಅಧಿಕಾರಿಗಳಿಗೆ ಪಿಪಿಪಿ ಯೋಜನೆಗಳ ಸಾಮರ್ಥ್ಯ ಅಭಿವೃದ್ಧಿ ತರಬೇತಿಗಳ ಆಯೋಜನೆ/ನಿಯೋಜನೆ ಮಾಡುವುದು.
9. ಕಾಲಕಾಲಕ್ಕೆ ಸ್ಥಳ ಪರಿವೀಕ್ಷಣೆ ಯೋಜನೆಯ ಮೇಲ್ವಿಚಾರಣೆ, ಸಕಾಲಿಕ ಪರಿಶೀಲನೆ, Claims Review and Concession issues ಇತ್ಯಾದಿ ಕೈಗೊಳ್ಳುವುದು;
10. ಆಂತರಿಕ ಪಿಪಿಪಿ ಕೋಶಕ್ಕೆ ಅವಶ್ಯಕತೆಯ ಮೇರೆಗೆ ತಜ್ಞರು/ಸಲಹೆಗಾರರನ್ನು ಸದಸ್ಯರನ್ನಾಗಿ ನೇಮಿಸಿ/ಆಹ್ವಾನಿಸಿಕೊಳ್ಳಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ವಿ. ವೆಂಕಟೇಶ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಆಹಾರ, ನಾಗರೀಕ ಸರಬರಾಜು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ.

<u>ಇವರಿಗೆ:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಆಯುಕ್ತರು, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ, ಬೆಂಗಳೂರು.
7. ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು.
8. ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ, ಬೆಂಗಳೂರು
9. ನಿರ್ದೇಶಕರು, ಸಾರ್ವಜನಿಕ ಖಾಸಗಿ ಸಹಭಾಗಿತ್ವ ಕೋಶ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸಸೌಧ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ.
11. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.